# ಮೆಲ್ನುಡಿ

ಮೆಲ್ಬೊರ್ನ್ ಕನ್ನಡಿಗರಿಗೆ ನಮಸ್ಕಾರ,

**ರವಿವಾರ ೧೯ನೆ ಏಪ್ರಿಲ್ ೨೦೦೯ ರಂದು ೨೦೦೯–೨೦೧೦ನೇ ವರ್ಷಕ್ಕಾಗಿ ಪದಾಧಿಕಾರಿಗಳನ್ನು ಚುನಾಯಿಸಿ ಹೊಸ ಕಾರ್ಯನಿರ್ವಾಹಕ ಮಂಡಳಿಯನ್ನು ರಚಿಸಲಾಗಿದೆಯಂದು ಪ್ರಕಟಿಸಲು ಸಂತೋಷವಾಗುತ್ತಿದೆ. ಪದಾಧಿಕಾರಿಗಳು ಈ ಕೆಳಗಿನಂತಿದ್ದಾರೆ:**

**ಅಧ್ಯಕ್ಷರು:**

ಶ್ರೀಮತಿ ಉಮಾ ಮಾಲಿಪಾಟಿಲ್

**ಉಪಾಧ್ಯಕ್ಷರು:**

ಶ್ರೀ ಕೆ. ಸುರೇಶ ಕುಮಾರ

**ಕಾರ್ಯದರ್ಶಿ:**

ಶ್ರೀ ಚಂದ್ರ ಬೆಂಗಳೂರು

**ಖಜಾಂಚಿ:**

ಶ್ರೀ ನಾಗಿ

**ಕಾರ್ಯನಿರ್ವಾಹಕ ಸದಸ್ಯರು:**

ಶ್ರೀ ಶ್ರೀನಿವಾಸ ಶರ್ಮ

ಶ್ರೀ ವಿ. ಸಿ. ಪ್ರಕಾಶ

ಶ್ರೀ ರವಿ ಶಂಕರ್

ಶ್ರೀ ಯುವರಾಜ ಹಿರಿಯೂರು

ಶ್ರೀ ಶೇಶಗಿರಿ ರಾವ್

ಶ್ರೀ ಗಿರಿ ರಾಜ್

ಶ್ರೀ ಪಿ. ಎನ್. ರಮೇಶ

ಶ್ರೀಮತಿ ಅರ್ಚನಾ ದೀಕ್ಷಿತ್

ಶ್ರೀಮತಿ ಭವ್ಯಾ ವಿನಯ

ಶ್ರೀ ಪವನ್ ಇವರ್ನಾಗರಾಜು

ಶ್ರೀ ದಯಾನಂದ ಶೆಟ್ಟಿ

ಶ್ರೀಮತಿ ಮಾಲತಿ ಬಾಲರಾಜ್

ಶ್ರೀಮತಿ ಶ್ರೀಲಕ್ಷ್ಮಿ ಅಜ್ಜಂಪುರ

ಶ್ರೀ ಶ್ರೀನಿವಾಸ ಮೂರ್ತಿ

ಶ್ರೀಮತಿ ಹರಿಣಿ ಗಿರೀಶ್

ಶ್ರೀಮತಿ ಲಕ್ಷ್ಮಿ ಮುರಳಿ

ಶ್ರೀ ಬಿಂದು ಮಾಧವ

ಶ್ರೀ ಜಯಂತ್ ಉಮಾಶಂಕರ್

ಶ್ರೀ ಸತೀಶ್ ಗೋಪಿನಾಥ

**ಪೋಷಕರು:**

ಡಾ. ಮಾರ್ತಂಡ್ ಜೋಶಿ.

**ನಮ್ಮ ಶಕ್ತಿ, ಯೋಗ್ಯತೆಗಳ ಪ್ರಕಾರ ಮೆಲ್ಬರ್ನ್ ಕನ್ನಡಿಗರ ನಿರೀಕ್ಷೆಗೂ ಮೀರಿ ಕನ್ನಡ ಸಮುದಾಯಕ್ಕೆ ಸೇವೆ ಸಲ್ಲಿಸಲು ಉತ್ಸುಕರಾಗಿದ್ದೇವೆ.**

ಪ್ರಗತಿಯ ಹಾದಿಯಲ್ಲಿ ಸಾಗುತ್ತಾ “ಮೆಲ್ಬರ್ನ್ ಕನ್ನಡ ಸಂಘ” ೨೦೧೦ನೆ ವರ್ಷದಲ್ಲಿ ಬೆಳ್ಳಿಹಬ್ಬಕ್ಕೆ ಕಾಲಿಡುತ್ತಲಿದೆ.

# ವಚನ ಸುಧೆ- ೧೨

ಗಂಗೆಯ ಮುಳುಗಿದವರೆಲ್ಲ ಪಾಪ ಮಾಡಿ ಸತ್ತಡೆ
ಅವರಿಂಗೆ ಪುಣ್ಯದ ಪದವಿಯುಂಟಾದಡೆ ಗಂಗೆ ಘನವೆಂಬೆ
ಮುಳುಗಿ ಪಾಪವ ಮಾಡದೆ ಸತ್ತು ಹೋದಡೆ
ಪುಣ್ಯದ ಪದವಿಯುಂಟಾದಡೆ ಘನವೆಂಬೆ
ಕಪಿಲಸಿದ್ಧಮಲ್ಲಿಕಾರ್ಜುನ.
– *ಶಿವಯೋಗಿ ಸಿದ್ಧರಾಮೇಶ್ವರ.*

ಸಂಕ್ರಮಣದಂದು ಸೊನ್ನಲಾಪುರದ ಸಿದ್ಧರಾಮೇಶ್ವರರ ಜನ್ಮ ದಿನ. ಮುದ್ದುಗೌಡ ಮತ್ತು ಸುಗ್ಗಲೆ ಎಂಬ ದಂಪತಿಗಳ ಮಗನಾಗಿ ಹುಟ್ಟಿ ಚಿಕ್ಕ ವಯಸ್ಸಿನಲ್ಲಿ ಸಗುಣ ಸಾಕ್ಷಾತ್ಕಾರ ಮಾಡಿಕೊಂಡು, ನೂರಾರು ಸಮಾಜಿಕ ಕಾರ್ಯಮಾಡುತ್ತಾ ಕರ್ಮಯೋಗಿಯಾಗಿದ್ದರು. ಅಲ್ಲಮ ಪ್ರಭುಗಳ ಜೊತೆ ಬಸವಕಲ್ಯಾಣಕ್ಕೆ ಬಂದು ತಮ್ಮ ೬೦ನೆ ವಯಸ್ಸಿನಲ್ಲಿ ಚನ್ನಬಸವಣ್ಣನವರಿಂದ ಇಷ್ಟಲಿಂಗ ದೀಕ್ಷೆ ಪಡೆದು ತನ್ನೊಳಗೆ ಲಿಂಗವನ್ನು, ಲಿಂಗದೊಳಗೆ ತನ್ನನ್ನು ಕಂಡುಕೊಂಡು ಶಿವಯೋಗಿ ಸಿದ್ಧರಾಮರಾದರು.

ಮೇಲಿನ ಈ ವಚನವು ಸಿದ್ಧರಾಮೇಶ್ವರರ ವೈಚಾರಿಕ ನಿಲುವನ್ನು ತೋರಿಸುತ್ತದೆ. ಅರಿದೊಡೆ ಶರಣ ಮರೆದೊಡೆ ಮಾನವ. ಮನುಷ್ಯ ತಿಳಿದೋ ತಿಳಿಯದೆಯೋ ಒಳ್ಳೆಯ, ಕೆಟ್ಟ ಕೆಲಸಗಳನ್ನು ಮಡುತ್ತಾನೆ. ಒಳ್ಳೆಯದು ಪುಣ್ಯವಾಗಿ, ಕೆಟ್ಟದ್ದು ಪಾಪವಾಗಿ ಪರಿಣಮಿಸುತ್ತವೆ. ಮಾಡಿದ ಪಾಪವನ್ನು ಕಳೆದುಕೊಳ್ಳಬೇಕೆಂದು ಅನೇಕರು ನಾನ ವಿಧದಲ್ಲಿ ಪ್ರಯತ್ನ ಮಾಡುತ್ತಾರೆ. ಅವುಗಳಲ್ಲಿ ಇದೊಂದು, ಗಂಗೆಯಲ್ಲಿ ಮುಳುಗಿದರೆ ಪಾಪ ಹೋಗುವದೆಂಬ ಮೂಢ ನಂಬಿಕೆಯಿಂದ ಹೋಗಿ ಮುಳುಗಿ ಬರುವವರ ಬಗ್ಗೆ ಸಿದ್ಧರಾಮೇಶ್ವರರು ತುಂಬಾ ಸ್ವಾರಸ್ಯವಾಗಿ ಹೇಳಿದ್ದಾರೆ.

ಗಂಗೆಯಲ್ಲಿ ಮುಳುಗಿದವರೆಲ್ಲಾ ಪಾಪ ಮಾಡಿ ಸತ್ತರೂ ಅವರಿಗೆ ಪುಣ್ಯದ ಪದವಿ ಉಂಟಾದರೆ ಗಂಗೆ ಘನವೆಂಬೆ, ಗಂಗೆಯಲ್ಲಿ ಮುಳುಗಿದ ನಂತರ ಪಾಪ ಮಾಡಲಾರದೆ ಸತ್ತುಹೋದರೆ ಆಗಲೂ ಪುಣ್ಯದ ಪದವಿಯುಂಟಾದರೆ ಘನವೆಂಬೆ ಎಂದು ಹೇಳುತ್ತಾರೆ. ಮುಂದೆ ಹೀಗೆ ಹೇಳುತ್ತಾರೆ

ಗಂಗೆಯ ಘನ ಮುಟ್ಟಿದ ಪ್ರಾಣೀಗಳೆಲ್ಲಾ ದೇವತೆಗಳಾದಡೆ,
ಗಂಗೆಯ ಸಂಚಾರ ಸಾವಿರಾರು ಗಾವುದ.
ಅದರಲ್ಲಿಯ ಪ್ರಾಣಿಗಳು ಅನಂತಾನಂತ.
ಇಷ್ಟು ಜೀವಿಗಳೆಲ್ಲಾ ದೇವರಾದಡೆ,
ಸ್ವರ್ಗದಲ್ಲಿ ನಿಯಮಿತ ದೇವತೆಗಳೆಂಬುದು ಅಪ್ರಸಿದ್ಧ ನೋಡ
ಕಪಿಲಸಿದ್ಧಮಲ್ಲಿಕಾರ್ಜುನಾ.

ಗಂಗೆಯನ್ನು ಮುಟ್ಟಿದ ಎಲ್ಲಾ ಪ್ರಾಣಿಗಳು, ಜೀವಿಗಳು ದೇವತೆಗಳಾದರೆ, ಗಂಗೆ ಸಾವಿರಾರು ಮೈಲಿಗಳಷ್ಟು ದೂರ ದೂರದವರೆಗೆ ಹರಿಯುವದರಿಂದ ಅದರಲ್ಲಿ ಅನಂತಾನಂತ ಜೀವಿಗಳೆಲ್ಲ ದೇವತೆಗಳಾಗಿ ಸ್ವರ್ಗಕ್ಕೆ ಹೋದರೆ, ಸ್ವರ್ಗದಲ್ಲಿ ಇಷ್ಟೇ ಅಂತ ನಿಯಮಿತ ದೇವತೆಗಳು ಇದ್ದಾರೆಂಬುದು ಒಪ್ಪಾಲಾಗದೆಂದು ಹೇಳುತ್ತಿದ್ದಾರೆ. ಗಂಗೆಯಲ್ಲಿ ಮೀಯುವುದರಿಂದ ಉಪಯೋಗವಿಲ್ಲ, ಯಾಕೆಂದರೆ ಪಾಪ ಮಾಡಲು ಕಾರಣ ಮನಸ್ಸು. ದೇಹ ನೀರಲ್ಲಿ ಮಿಂದರೆ ದೇಹಕ್ಕೆ ಅಂಟಿದ ಕೊಳೆ ಹೋಗುತ್ತದೆ. ಮನಕ್ಕಂಟಿದ ಪಾಪ ಹೋಗದು. ಅದನ್ನೇ ಸರ್ವಜ್ಞ ಕೇಳುತ್ತಿದ್ದಾರೆ "ಮೀಪರೆ ಪೋಪರೆ ಪಾಪವೇನು ಕೆಸರೆ? ಮೀಪರೆ ಮೈಯ್ಯ ಮಲ ಪೋಪುದಾ ಪಾಪ ಲೇಪವಾಗಿಕ್ಕು ಸರ್ವಜ್ಞ" ಮಿಂದರೆ ಹೋಗಲು ಪಾಪವೇನು ಕೆಸರೇ? ಮಿಂದ ನಂತರವೂ ಪಾಪ ಮನಸ್ಸಿಗೆ ಅಂಟಿಕೊಂಡೇ ಬರುತ್ತದೆ ಎಂದು ಹೇಳುತ್ತಾರೆ.

ಮತ್ತೆ ಕೆಲವರು ಪಾಪ ಮಾಡಲು ಕಾರಣ ಮನಸ್ಸು ಎಂಬುದು ಮರೆತು ಕೈಗಳು ತಪ್ಪು ಮಾಡಿದವೆಂದು ಕೈಗಳನ್ನೇ ಕಡೆದುಕೊಳ್ಳುವರು. ಹಾಗೆ ಮಾಡಿದವರೆಲ್ಲಾ 'ಭಕ್ತ ಕುಂಬಾರನಾಗಲು' ಸಾಧ್ಯವೇ? ಇದೂ ಒಂದು ರೀತಿಯ ಮೂಢತನ. ಕೈ ಕಳೆದುಕೊಂಡು ಅಸಹಾಯಕರಾಗಿ, ಅವಲಂಬಿತರಾಗಿ ಇರುವುದೂ ಹಿಂಸೆಯೇ. ಮೂಢತನದಲ್ಲಿ ದೇಹವನ್ನು ಉಗ್ರವಾಗಿ ದಂಡಿಸಿಬಾರದು. ಪಾಪವನ್ನು ಕಳೆದುಕೊಳ್ಳಲು ,ಸುಲುಭವಾದ ಮಾರ್ಗವನ್ನು ಗುರು ಬಸವಣ್ಣನವರು ಹೇಳುತ್ತಾರೆ

ಎಲವೊ, ಎಲವೋ, ಪಾಪಕರ್ಮವ ಮಾಡಿದವನೇ,
ಎಲವೊ, ಎಲವೋ, ಬ್ರಹ್ಮಹತ್ಯವ ಮಾಡಿದವನೇ,
ಒವ್ಮೆ ಶರಣೆನ್ನೆಲವೋ
ಒವ್ಮೆ ಶರಣೆಂದಡೆ ಪಾಪಕರ್ಮ ಓಡುವವು.
ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು
ಒಬ್ಬಗೆ ಶರಣೆನ್ನು ನಮ್ಮ ಕೂಡಲಸಂಗಮದೇವಂಗೆ.

ಪ್ರಾಯಶ್ಚಿತ್ತಾ ಮಾಡಿಕೊಳ್ಳುತ್ತಾ ಹೋದಲ್ಲಿ ಚಿನ್ನದ ಪರ್ವತವೇ ಮುಗಿದರೂ ನಮ್ಮ ಪಾಪ ಮುಗಿಯುವುದಿಲ್ಲ, ಯಾಕೆಂದರೆ ಪಾಪ ಮಾಡಿ ಅದಕ್ಕೆ ಪ್ರಾಯಶ್ಚಿತ್ತ ಮಾಡ್ತಾ ಹೋದಾಗ ಪಾಪ ಮಾಡಿದ ಭಾವವೇ ಇರದೆ ಮತ್ತೆ ಮತ್ತೆ ಪಾಪ ಮಾಡಲು ಅವಕಾಶ ಸಿಕ್ಕಿದಂತಾಗುತ್ತದೆ. ಹಾಗೆ ಮಾಡದೇ ನಿಜವಾಗಿಯೂ ಪಶ್ಚಾತಾಪವಾಗಿ, ನಾನು ಪಾಪಿ ಎಂದು ಗೋಳಾಡದೆ ದೇವರಲ್ಲಿ ಒಂದು ಸಲ ಶರಣೆಂದರೆ ಕರುಣಾಮಯಿ ದೇವರು ಖಂಡಿತ ಕ್ಷಮಿಸುತ್ತಾನೆ ಎಂದು ಭರವಸೆಯನ್ನು ಕೊಡುತ್ತಿದ್ದಾರೆ. ಆದರೇ ಮತ್ತೊವ್ಮೆ ತಪ್ಪುಮಾಡಬಾರದು, ಎಕೆಂದರೆ ಬಸವಣ್ಣಾನವರು ಹೇಳುವಂತೆ "ನಿಚ್ಚ ನಿಚ್ಚ ಪ್ರಾಯಶ್ಚಿತ್ತವನೊಲ್ಲ ನಮ್ಮ ಕೂಡಲಸಂಗಮದೇವ" ಎಂದು. ಪ್ರಾಯಶ್ಚಿತ್ತದಿಂದ ಪಾಪಪ್ರಜ್ಞೆ ಹೋಗುವುದಿಲ್ಲ, ಪಶ್ಚಾತಾಪದಿಂದ ಮನಶುಧ್ಧಿಯಾಗುತ್ತದೆ. ಗುರುವಿನಲ್ಲಿ ಶ್ರದ್ಧೆ, ದೇವನಲ್ಲಿ ನಂಬಿಕೆ ಇದ್ದರೆ ಎಲ್ಲವೂ ಸಾಧ್ಯ.

– ಗಿರಿಜಕ್ಕ (ಗಿರಿಜಾ ಧರ್ಮರಡ್ಡಿ)

---

ಆತ್ಮ ಹೇ ನನ್ನಾತ್ಮ
ನೀನೇ ನಾ ನಂಬಿರುವ ಪರಮಾತ್ಮ

ನನ್ನೀ ಆತ್ಮ ನುಡಿವುದು ನಿತ್ಯ
ಆ ನುಡಿಯೇ ದೇವರ ಸತ್ಯ
ಆತ್ಮವೇ ನೀ ಕೇಳು ನಾ ನಿನ್ನ ಪೂಜಿಸುವೆ
ಪ್ರೀತಿಸುವೆ, ನನ್ನ ಪರಮಾತ್ಮಗೆ ಅರ್ಪಿಸುವೆ

ಆತ್ಮ ಹೇ ನನ್ನಾತ್ಮ......
ನೀನೇ ನಾ ನಂಬಿರುವ ಪರಮಾತ್ಮ

ಬೆಳಕು ಕತ್ತಲೆಯ ಸಂಬಂಧವೇ
ಜೀವನದ ಕಷ್ಟ ಸುಖಗಳಿಗಿರುವ ಸಂಬಂಧ
ಹೇ ನನ್ನಾತ್ಮವೇ, ಬೆಳಕಲ್ಲಿ ನನ್ನನು ದಾರಿ ತಪ್ಪಿಸಬೇಡ
ಕತ್ತಲಲಿ ನನ್ನಲ್ಲಿರುವ ಧೈರ್ಯವ ಅಡಗಿಸಬೇಡ

ಜೀವನದ ಸುಖದಲಿ ನನ್ನಲ್ಲಿರುವ ತನ್ನತನವನು ಮರೆಸಬೇಡ
ಜೀವನದ ಕಷ್ಟದಲ್ಲಿ ತನ್ನತನವನು ತೊರೆಸಬೇಡ

ಆತ್ಮ  ಹೇ ನನ್ನಾತ್ಮ
ನೀನೇ ನಾ ನಂಬಿರುವ ಪರಮಾತ್ಮ

ನನ್ನಾತ್ಮವೇ ನನ್ನನು ಪ್ರೀತಿಯ ಸಹನೆಯ ದಾಸನ ಮಾಡು
ದ್ವೇಷ, ಅಸೂಯೆ, ಮತ ಭೇದ ನನ್ನ ಮನದಲಿ ತುಂಬದಿರು
ಪರರ ಸೇವೆ ಪರಮಾತ್ಮನ ಸೇವೆ,
ಗುರು ಹಿರಿಯರ ಸೇವೆ ಪರಮಾತ್ಮನ ಪೂಜೆ
ಹೇ ನನ್ನಾತ್ಮ ನನ್ನೀ ಕಂಗಳಲಿ
ಆ ಪರಮಾತ್ಮನ ಮೂರ್ತಿಯ ತುಂಬು,
ನನ್ನ ನಾಲಿಗೆಯಲ್ಲಿ ಆ ಪರಮಾತ್ಮನ ನಾಮವ ನೆಲೆಸು...

ಅತ್ಮ ಹೇ ನನ್ನಾತ್ಮ
ನೀನೇ ನಾ ನಂಬಿರುವ ಪರಮಾತ್ಮ

**By Nandini Shanbhog**

ಓಂ ಗಜಾನನ ಗಣದೀಶ, ಏಕದಂತ ಶರಣು ಶರಣು ದೇವ
ಶರಣು ಶರಣು ದೇವ ಶರಣು ಶರಣು ನಿನಗೆ

ಗಣಪತಿ ನೀ ಒಲಿದರೆ ಕಷ್ಟವು ಬರದು
ಗಣಪತಿ ನಿನ್ನ ನೆನೆದರೆ ಸುಖವು ಸುಖವು

ಏಕದಂತ ಮೂಷಿಕ ವಾಹನ  ಮೋದಕ ಹಸ್ತ
ಶರಣು ದೇವ ನಿನಗೆ
ಶರಣು ಶರಣು ದೇವ ಶರಣು ಶರಣು ನಿನಗೆ

ತಪ್ಪನೆಲ್ಲ ಮನ್ನಿಸು ದೇವ, ಒಳ್ಳೆಯ ಬುದ್ದಿಯ ನೀಡು ಬೇಗ
ನಿನ್ನ ದಿವ್ಯ ದೃಷ್ಟಿ ಕಿರಣ ಒಂದನು ನಮ್ಮ ಮೇಲೆ ಇಟ್ಟರೆ ಸಾಕು ದೇವ
ಸಾರ್ಥಕವಾಯಿತು ನನ್ನೀ ಬದುಕು, ಪುಣ್ಯವ ಮಾಡಿತು ನನ್ನೀ ನಾಲಿಗೆ
ನಿನ್ನ ಸ್ಮರಣೆಯ ಭಾಗ್ಯವ  ಕೊಡು ನನಗೆ ಈ ನನ್ನ ದೇಹದಲ್ಲಿ ಜೀವವಿರುವವರೆಗೆ
ಶರಣು ಶರಣು ದೇವ ಶರಣು ಶರಣು ನಿನಗೆ
ವಿಶ್ವದಲಿ ಶಾಂತಿಯ ನೆಲೆಸು, ಎಲ್ಲರ ಮನದಲಿ ಪ್ರೀತಿಯ ತುಂಬು
ಎಲ್ಲರ ಬಾಳನು ಬೆಳಗಿಸು ದೇವ,  ನಿನ್ನಲ್ಲಿ ಬೇಡಿಬಂದ ಎಲ್ಲರು ಸಮಾನ

ಬಡವ ಧನಿಕರೆಂಬ ಭೇದಭಾವವಿಲ್ಲ, ಮೊದಲ ಪೂಜೆಪಡೆವ, ದೇವರ ದೇವ,
ಪಾರ್ವತಿ ಪರಮೇಶ್ವರರ ಪ್ರೀತಿಯ ಕಂದ, ವಿಘ್ನ ವಿನಾಶಕ, ಸಿದ್ಧಿ ಪ್ರದಾಯಕ
ಏಕದಂತ ಮೂಷಿಕ ವಾಹನ ಮೋದಕ ಹಸ್ತ
ಶರಣು ಶರಣು ದೇವ ಶರಣು ಶರಣು ನಿನಗೆ

**By Nandini Shanbhog**

---

## ಹಲವು ಮುಖ್ಯ ಸೂಚನೆಗಳು

### 1. ಕನ್ನಡ ತರಗತಿಗೆ ಸ್ವಯಂ ಸೇವಕ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.

ನಿಮಗೆಲ್ಲರಿಗೂ ತಿಳಿದಿರುವ ಹಾಗೆ ಕನ್ನಡ ಸಂಘದ ವತಿಯಿಂದ ಪ್ರತಿ ತಿಂಗಳ ಮೊದಲನೇ ಹಾಗೂ ಮೂರನೇ ಭಾನುವಾರ ಮಧ್ಯಾಹ್ನ 2.30 ರಿಂದ 3.30 ರವರೆಗೆ ಮಕ್ಕಳಿಗೆ ಉಚಿತ ಕನ್ನಡ ಶಿಕ್ಷಣ ತರಗತಿ ನಡೆಯುತ್ತಿದೆ. ಇದಕ್ಕಾಗಿ ಈಗ ಮಕ್ಕಳಿಗೆ ಕನ್ನಡ ಕಲಿಸಲು ಸ್ವಯಂ ಸೇವಕ ಶಿಕ್ಷಕ/ಶಿಕ್ಷಕಿಯರ ಅಮೂಲ್ಯ ಸಮಯದ ಅವಶ್ಯಕತೆಯುಂಟಾಗಿದೆ.
ನಮ್ಮ ಕನ್ನಡ ಭಾಷೆ, ಸಂಸ್ಕೃತಿ, ಇತಿಹಾಸದ ಹಿರಿಮೆಯನ್ನು ಮೆಲ್ಬರ್ನ್‌ನ ಮಕ್ಕಳಿಗೆ ಸಾರಲು ಆಸಕ್ತರಿಗೆ ಇದೊಂದು ಸುವರ್ಣಾವಕಾಶ. ಕನ್ನಡ ಭಾಷೆಯ ಕಂಪನ್ನು ಎಲ್ಲೆಡೆ ಚೆಲ್ಲಲು ಕನ್ನಡ ಸಂಘ ನಿಮಗೆಲ್ಲರಿಗೂ ಅವಕಾಶ ಕಲ್ಪಿಸಿಕೊಟ್ಟಿದೆ. ನೀವು ನಿಮ್ಮ ಮಕ್ಕಳನ್ನು ತರಗತಿಗೆ ಹಾಜರುಪಡಿಸುವುದರ ಜೊತೆಗೆ ನೀವೇ ತರಗತಿಯನ್ನು ತೆಗೆದುಕೊಳ್ಳಬಹುದು. ಕನ್ನಡ ಭಾಷೆಯನ್ನು ಉಳಿಸಿ ಮುಂದಿನ ಜನಾಂಗಕ್ಕೆ ಕೊಂಡೊಯ್ಯಲು ಸಂಘಕ್ಕೆ ನಿಮ್ಮಂತಹ ಸ್ವಯಂ ಸೇವಕ/ಸೇವಕಿಯರ ಸಹಾಯ ಅತ್ಯಗತ್ಯ.
ಆದ್ದರಿಂದ ಆಸಕ್ತಿಯುಳ್ಳವರು ತಮ್ಮ ಇ–ಮೇಲ್ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ಕನ್ನಡ ಸಂಘದ ಕಾರ್ಯದರ್ಶಿಗಳಾದ ಚಂದ್ರ ಬೆಂಗಳೂರುರವರನ್ನು 0412 818 586 ಸಂಖ್ಯೆಯಲ್ಲಿ ಸಂಪರ್ಕಿಸಬೇಕಾಗಿ ವಿನಂತಿ.

### 2. ಅಂತೂ ಇಂತೂ ಕೊನೆಗೂ ಬಂತು ನವೀಕರಿಸಿದ ವೆಬ್‌ಸೈಟ್

ಕನ್ನಡ ಸಂಘದ ವೆಬ್‌ಸೈಟ್ www.mks.org.au ಹೊಸ ವರ್ಷಕ್ಕೆ ಹೊಸ ಅವತಾರ ತಳೆದಿದೆ. ಹಳೆಯ ವೆಬ್‌ಸೈಟ್‌ಗಿಂತ ಆಕರ್ಷಕ ಹಾಗೂ ವರ್ಣಮಯವಾಗಿದೆ. ಆದ್ದರಿಂದ ದಯವಿಟ್ಟು ತಾವೆಲ್ಲರೂ ಈ ಹೊಸ ವೆಬ್‌ಸೈಟ್‌ನ ರೂಪ ಹಾಗೂ ಅನುಭವ ಹೇಗಿದೆ ಎಂದು ಖಂಡಿತ ನಮಗೆ ತಮ್ಮ ಅಮೂಲ್ಯ ಪ್ರತಿಕ್ರಿಯೆ/ಸಲಹೆ ತಿಳಿಸಬೇಕಾಗಿ ಕೋರಿಕೊಳ್ಳುತ್ತೇವೆ.

### 4. ವಧು – ವರಾನ್ವೇಷಣೆ

**ಗೌಡ ಕನ್ನಡ / ತೆಲುಗು ವರ ಬೇಕಾಗಿದ್ದಾರೆ.**

**M B A** ಮುಗಿಸಿ **H P Technologies** ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ವಧುವಿಗೆ 26 ವರ್ಷ. ಎತ್ತರ 5 ಅಡಿ 2 ಇಂಚು. ಸ್ನೇಹಪರ ಹಾಗೂ ಸುಸಂಸ್ಕೃತ ಮನೆತನ. ಆಕೆಯ ಕುಟುಂಬ ಮೆಲ್ಬರ್ನ್ ಹಾಗೂ ಬೆಂಗಳೂರಿನಲ್ಲಿದೆ.
ವರ ಅಥವ ವರನ ಕುಟುಂಬದವರು ಮೆಲ್ಬರ್ನ್‌ನಲ್ಲಿ ಅಥವ ಹೊರದೇಶದಲ್ಲಿದ್ದರೂ ಸಹ ಸಂಪರ್ಕಿಸಬೇಕಾದ ವಿಳಾಸ

ಇ – ಮೇಲ್ :– harihema2005@gmail.com

ದೂರವಾಣಿ :- 03- 9029 6955 / 0432 440 391



ಮೆಲ್ಬರ್ನ್ ಕನ್ನಡ ಸಂಘದ ವತಿಯಿಂದ ಪ್ರತಿ ತಿಂಗಳ 1ನೇ ಹಾಗೂ 3ನೇ ಭಾನುವಾರದಂದು ಕನ್ನಡ ಗ್ರಂಥಾಲಯ ಹಾಗೂ ಮಕ್ಕಳಿಗೆ ಕನ್ನಡ ಪಾಠಶಾಲೆಯ ಸೌಕರ್ಯವನ್ನು ಮಾಡಲಾಗಿದೆ.

ಸ್ಥಳ:- ಫ್ರೆಗಾನ್ ಹಾಲ್
ಫ್ರೆಗಾನ್ ರಸ್ತೆ , ಮೊನಾಷ್ ಆಸ್ಪತ್ರೆ ಪಕ್ಕ
ಕ್ಲೇಟನ್ ಮೆಲ್‌ವೇ - 70 ಡಿ12

ಗ್ರಂಥಾಲಯದ ಸಮಯ :- ಮಧ್ಯಾಹ್ನ 2 ರಿಂದ 4 ರವರೆಗೆ.

ಕನ್ನಡ ಪಾಠಶಾಲೆಯ ಸಮಯ :- ಮಧ್ಯಾಹ್ನ 2.30 ರಿಂದ 3.30 ರವರೆಗೆ.

ಮೆಲ್ಬರ್ನ್‌ನ ಎಲ್ಲ ಕನ್ನಡಿಗರು ಈ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.




*Girish VijayaSarathy*

*SPR Productions*
*No 10 Hoffman street*
*Cheltanam Victoria 3192*
*Mobile: 0401252640*
*email id: girishram@three.com.au*

Suvithra Property Developments Pty Ltd

REGISTERED
Building Practitioner

**Suvithra Property Developments Pty Ltd**

***Ravi Chandra***
***House and Land Package***
***& Building New Homes***
***Mobile: 0421273191***



# Ashley Jewellers

TAX FREE

*Jewellers of Distinction*



85 Collins Street Melbourne Tel: (03) 9654 4866 Fax: (03) 9654 4889

www.ashleyopals.com.au Email: ashley@ashleyopals.com.au

## Company Overview

The Azurn Group is a specialist information and communications technology (ICT) group of companies resulting from the 2007 merger of Value Chain International Limited (VCIL) with Azurn. The Azurn Group combines VCIL's mature Digital Publishing Solutions (DPS) business with Azurn's patented collaboration technology, Unified XML.

While the core business of the Azurn Group has been initially focussed on delivering leading edge digitisation services to the publishing industry through VCIL's DPS business, the Azurn Group has been able to leverage off this success to expand into the **education and enterprise** sectors and into the broader collaboration applications market.

## Digital Publishing Solutions

Publishers use the Azurn Group's products and its conversion capabilities to globally distribute electronic content (books) securely and cost-effectively. The DPS business is divided into two key components, Knowledge Process Outsourcing (KPO) and Information Technology (IT). Through the KPO arm, the Azurn Group delivers value to book publishers by reducing the cost of book production and distribution by converting paper books into an electronic form (XML format). This conversion is undertaken in the production centres of India. Through the IT arm, the Azurn Group develops new intellectual property by providing software solutions to the publishing industry and improving the efficiency of KPO. The Azurn Group has developed several digital publishing products over the past six years in the areas of book production, secure electronics sales, distribution of eBooks and specialised marketing.

To date, revenue from such activities has principally been earned by creating, converting (to XML), storing, distributing and selling digital books.

## Collaboration technology

The Azurn Group's collaboration technology is based on an innovative approach to solving the significant challenge of:

(i)Integrating voice, data and video so that it is delivered concurrently and seamlessly; (ii) converging wireless, PSTN and broadband carrier networks without deploying additional equipment at the carrier networks; (iii) providing complete control to companies seeking to manage their own ICT services without relying on carrier equipment or any new applications through an in-house application; and (iv) delivering business solutions on any device, anywhere and anytime. The centrepiece of the Azurn Group's collaboration technology is its Unified XML platform. The Unified XML platform is unique as it enables voice, data and video to be delivered concurrently across any carrier network, over the internet, broadband, telephone and wireless protocols and onto any device such as personal computers, mobile phones, lap tops, PDA's and other devices. The Azurn Group offers a platform-based integrated audio, video and web collaboration appliance, a Multimedia Convergence Platform known as Merlin, to provide full featured audio, data and desktop collaboration capability to its clients. The initial application of Merlin is a simple collaboration platform which allows large groups to interact through video, share and alter documents and converse simultaneously through either the internet and/or telephone from anywhere in the world. A further application recently launched is a proprietary product called **Klik2 Konnect (K2K)** which allows seamless connection between the internet and phone through a single mouse click providing services.



The fundamental distinguishing features of the Azurn Group's collaboration technology are: (i) it enables true convergence of PSTN (voice) and IP (data), all other competing paradigms are working with VoIP technologies;(ii)it can be deployed at a corporate enterprise behind its firewall; and (iii)it is a true platform and not an application, allowing many applications to be built on it.

**Azurn International Ltd. ( ABN: 75 103 539 135 )**
Level 8, 520 Collins Street, Melbourne VIC 3000
Ph: +61 3 9614 8985 Fax: +61 3 9614 3425 Email: info@azurn.com.au Website: www.azurn.com